ಅ) ಹುಬ್ಬಳ್ಳಿ–ಧಾರವಾಡ ಮಧ್ಯ ಭಾಗದಲ್ಲಿಯ ರಾಯಪೂರ ಹತ್ತಿರವಿರುವ ವಿಶ್ರಾಂತಿ ಧಾಮವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು,

ಆ) ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) 2006–07ನೇ ಸಾಲಿನ ಆಯವ್ಯಯ ಅಪೆಂಡಿಕ್ಸ್ –ಇ ಯಲ್ಲಿ ಹುಬ್ಬಳ್ಳಿ–ಧಾರವಾಡ ಮಧ್ಯ ಭಾಗದಲ್ಲಿನ ರಾಯಪೂರ ಹತ್ತಿರವಿರುವ ವಿಶ್ರಾಂತಿಧಾಮ (ಸರ್ಕ್ಯೂಟ್ ಹೌಸ್) ಮೊದಲನೇ ಮಹಡಿಗೆ ಲೇ ಶೀ 4059 ಅಡಿಯಲ್ಲಿ ರೂ 30 00 ಲಕ್ಷಗಳ ಅಂದಾಜು ಮೊತ್ತಕ್ಕೆ ಶೇ 30ರಷ್ಟು ಅಂದರೆ ರೂ 9 00 ಲಕ್ಷಗಳ ಅನುದಾನವು ಬಿಡುಗಡೆಯಾಗಿರುತ್ತದೆ ಅಲ್ಲದೇ ಸದರಿ ಕಟ್ಟಡದ ಕಾಂಪೌಂಡ್‌ಗೋಡೆ ಕಾಮಗಾರಿಗೆ ರೂ 22 00 ಲಕ್ಷಗಳ ಅಂದಾಜು ಮೊತ್ತಕ್ಕೆ ರೂ 6 26 ಲಕ್ಷಗಳ ಅನುದಾನವು ಬಿಡುಗಡೆಯಾಗಿರುತ್ತದೆ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

880(390) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಐ ಟಿ ಸಂಸ್ಥೆಗಳು ಜಾಗ ಕೋರಿ ಅರ್ಜಿಗಳನ್ನು ನಲ್ಲಿಸಿವೆ,

ಆ) ಈವರೆಗೆ ಎಷ್ಟು ಐ ಟಿ ಸಂಸ್ಥೆಗಳಿಗೆ ಜಾಗ ನೀಡಲಾಗಿದೆ ಹಾಗೂ ಯಾವ ದರದಲ್ಲಿ ನೀಡಲಾಗಿದೆ (ಸಂಸ್ಥೆಗಳವಾರು ಪೂರ್ಣ ವಿವರ ನೀಡುವುದು),

ಇ) ಹಾಗಿಲ್ಲವಾದಲ್ಲಿ, ಕಾರಣಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) 17 ಐ ಟಿ ಸಂಸ್ಥೆಗಳು ಅರ್ಜಿ ನಲ್ಲಿಸಿವೆ

ಆ) ಸರ್ಕಾರದ ಆದೇಶ ಸಂಖ್ಯೆ ನಅಇ 116 ಎಹೆಚ್‌ಡಿ 2006, ದಿನಾಂಕ 24–1–2007ರಲ್ಲಿ ಕೆಳಕಂಡ ಐ ಟಿ ಸಂಸ್ಥೆಗಳಿಗೆ ಎಕರೆಗೆ ರೂ 10 ಲಕ್ಷ ಬೆಲೆಗೆ ಹಂಚಿಕೆ ಮಾಡಲು ಮಂಜೂರಾತಿ ನೀಡಲಾಗಿದೆ, ಅದರನ್ವಯ ಪಾಲಿಕೆಯು ಜಮೀನು ಮಂಜೂರು ಮಾಡಲು ಕ್ರಮ ತೆಗೆದುಕೊಳ್ಳುತ್ತದೆ

ಕ್ರ ಸಂ	ಕಂಪೆನಿಗಳ ಹೆಸರು	ಹಂಚಿಕೆ ಮಾಡಲು ಉದ್ದೇಶಿಸಿರುವ ಭೂಮಿ
1	ಮೆ, NSI ಹೆಲ್ತ್ ಕೇರ್ ಬಿಪಿಒ ಕಂಪೆನಿ, ಹುಬ್ಬಳ್ಳಿ	5 ಎಕರೆ
2	ಮೆ ದೀಕ್ಷಾ ಟೆಕ್ನಾಲಿಜೀಸ್, ಬೆಂಗಳೂರು	3 ಎಕರೆ
3	ಮೆ ಎಬೆಲ್ ಡಿನೈನ್ ಇಂಜಿನಿಯರಿಂಗ್ ಸರ್ವಿನ್ ಪ್ರೈವೇಟ್ ಲಿಮಿಟೆಡ್, ಧಾರವಾಡ	15 ಎಕರೆ
4	ಮೆ PAC ಸಾವ್ಟ್, ಬೆಂಗಳೂರು	4 ಎಕರೆ
5	ಮೆ ಟ್ರಿನಿಟಿ ಟೆಕ್ನಾಲಜೀಸ್ ಅಂಡ್ ಸಾಫ್ಟ್‌ವೇರ್ ಸೆಲ್ಯೂಶನ್ಸ್ ಪ್ರೈ ಲಿ ಹುಬ್ಬಳ್ಳಿ	1 ಎಕರೆ
6	ಮೆ ಮಹಾವೀರ್ ಇನ್‌ಪೋವೇ, ಹುಬ್ಬಳ್ಳಿ	1 ಎಕರೆ
-7	ಮೆ ಪನ್‌ಆರ್ಬರ್ ಇನ್‌ಪೋಟೆಕ್ಸ್, ಹುಬ್ಬಳ್ಳಿ	1 ಎಕರೆ
8	ಮೆ ಸುಕಲ್ಪ ಸಮಿಕಂಡಕ್ಟರ್, ಬೆಂಗಳೂರು	3 ಎಕರೆ
9	ಮೆ ಸಿ2 ಸಿಲಿಕಾನ್ ಸಾಫ್ಟ್‌ವೇರ್ ಸೆಲ್ಯೂಶನ್ಸ್ ಪ್ರೈ ಲಿ ಬೆಂಗಳೂರು	3 ಎಕರೆ
10	ಮೆ ಎನ್‌ವಿಷನ್, ಬೆಂಗಳೂರು	1 ಎಕರೆ
11	ಮೆ ಜಿರುಲೆ ಟೆಕ್ನಾಲಿಜಿಸ್ ಪ್ರೈ ಲಿಮಿಟೆಡ್, ಬೆಂಗಳೂರು	2 5 ಎಕರೆ
	ಒಟ್ಟು	**26 ಎಕರೆ**

ಇ) ಉದ್ಭವಿಸುವುದಿಲ್ಲ

882(392) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?